ಓ ಎಸ್ ನಂ. 46/2021 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಹೆಚ್.ಕೆ.ಸುಪ್ರಭಾ

ದಿನಾಂಕ 18-07-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್.ಎಸ್.ಡಿ. ವಕೀಲರಿಂದ.

1) ದಿನಾಂಕ 14.11.2015 ಡೋರನಹಳ್ಳಿ ಗ್ರಾಮ ಪಂಚಾಯಿತಿ ಪಿಡಿಓ ರವರು ನನಗೆ ಮಾಹಿತಿ ಹಕ್ಕು ಅಧಿನಿಯಮದಡಿ ನೀಡಿದ ಮಾಹಿತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 32 ಎಂದು,

2) ದಾವಾಸ್ವತ್ತಿಗೆ ಸಂಬಂಧಿಸಿದ ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ ಟ್ರ್ಯಾಕ್ಟ್ ಅನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 33 ಎಂದು,

3) ಕಾಳೇನಹಳ್ಳಿ ಗ್ರಾಮದ ಸರ್ವೆ ನಂ.152/2 ಗೆ ಸಂಬಂಧಿಸಿದ ಒಂದು ಕೈ ಬರಹ ಪಹಣಿ ಪತ್ರಿಕೆಯನ್ನು ಹಾಗೂ ಅದಕ್ಕೆ ಸಂಬಂಧಿಸಿದ ಎಂ.ಆರ್. ಎಕ್ಸ್ ಟ್ರ್ಯಾಕ್ಟ್ ಅನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 34 ಮತ್ತು 35 ಎಂದು,

4) ಕೆ ಆರ್ ನಗರ ಪೋಲೀಸ್ ಠಾಣೆಯಲ್ಲಿ 1 ನೇ ಪ್ರತಿವಾದಿ ನೀಡಿದ ಹೇಳಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 36 ಎಂದು,

5) ದಿನಾಂಕಃ11.07.2014 ರಂದು ಪಿಡಿಓ ಡೋರನಹಳ್ಳಿರವರು ನನಗೆ ಕಳುಹಿಸಿದ ಖಾತಾ ರದ್ದತಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 37 ಎಂದು,

6) ನನಗೆ ಮಾಹಿತಿ ಹಕ್ಕು ಅಧಿನಿಯಮದಡಿ ಡೋರನಹಳ್ಳಿ ಗ್ರಾಮ ಪಂಚಾಯಿತಿ ರವರು ದಿನಾಂಕಃ28.02.2015 ರಂದು ಡೋರನಹಳ್ಳಿ ರವರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಕೆ ಆರ್ ನಗರ ರವರಿಗೆ ಕಳುಹಿಸಿದ ಪತ್ರದ ಪ್ರತಿಯನ್ನು ನೀಡಿದ್ದು ಅದನ್ನು ನಾನು ಹಾಜರುಪಡಿಸಿದ್ದು, ಅದನ್ನು ನಿಪಿ 38 ಎಂದು,

7) ಒಂದು ಕಂದಾಯ ರಶೀದಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 39 ಎಂದು,

8) ನಮೂನೆ-11 (ಮ್ಯುಟೇಶನ್ ರಿಜಿಸ್ಟರ್) ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 40 ಎಂದು,

9) ದಿನಾಂಕಃ08.02.1985 ರಂದು ಸಿದ್ದೇಗೌಡ ಎಂಬುವವರು ವಿಜೇಯೇಂದ್ರ ಎಂಬುವವರಿಗೆ ಸರ್ವೆ ನಂ.152/2 ರಲ್ಲಿನ 1 ಎಕರೆ 34 ಗುಂಟೆ ಜಮೀನನ್ನು ಮಾರಾಟ ಮಾಡಿದ ಬಗ್ಗೆ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 41 ಎಂದು,

10) ದಿನಾಂಕಃ05.03.2014 ರಂದು 2 ನೇ ಪ್ರತಿವಾದಿಗೆ 1, 3 ರಿಂದ 5 ನೇ ಪ್ರತಿವಾದಿಗಳು ನಿವೇಶನ ಸಂಖ್ಯೆಃ63 ನ್ನು ಮಾರಾಟ ಮಾಡಿದ ಬಗ್ಗೆ ನೊಂದಾಯಿತ ಕ್ರಯಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ 42 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಆರ್.ಸಿ. ವಕೀಲರಿಂದಃ</u>

ಪ್ರತಿವಾದಿ ಪರ ವಕೀಲರು ಹಾಜರಿದ್ದು, ಕಾಲವಾಕಾಶ ಕೋರಿರುತ್ತಾರೆ, ಆದ್ದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಓ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.